**ರಾಜಕೀಯ ಪಕ್ಷದ ಸದಸ್ಯ ಆಗುವುದು ಬೇರೆ; ರಾಜಕೀಯ ಪ್ರಜ್ಞೆ ಇಟ್ಟುಕೊಳ್ಳುವುದು ಬೇರೆ. ನಾನು ಎಡಪಂಥೀಯನೇ ಇರಬಹುದು; ಆದರೆ ಎಡಪಕ್ಷದವನಲ್ಲ.**

ಏಕಾಂಗಿಗಳಾದೆವು. ಈಗ ಕಾವೇರಿ ತೀರ್ಪಿನ ವಿಷಯಕ್ಕೆ ಸಂಬಂಧಿಸಿ ಬುದ್ಧಿವಂತಿಕೆಯಿಂದ ನಾವು ಕೋರ್ಟ್ ಹೋರಾಟ ಮಾಡಿದಂತೆಯೇ, ಕನ್ನಡ ಮಾಧ್ಯಮದ ವಿಷಯದಲ್ಲೂ ಮಾಡಲು ಸಾಧ್ಯವೇ ಎನ್ನುವುದನ್ನು ಪರಿಶೀಲಿಸಬೇಕು.

★ ಏಕೆ ಈ ವಿಷಯದಲ್ಲಿ ಕನ್ನಡಿಗರ ಒಗ್ಗಟ್ಟಿನ ಹೋರಾಟ ಸಾಧ್ಯವಾಗುತ್ತಿಲ್ಲ? ಸಾಹಿತಿಗಳಲ್ಲೂ ಗುಂಪುಗಾರಿಕೆ, ಭಿನ್ನಮತಗಳಿವೆಯಲ್ಲ? ಸಾಹಿತಿಗಳ ಬಗ್ಗೆಯೂ ಅಗೌರವದ ವಾತಾವರಣ ಕಾಣುತ್ತಿದೆಯಲ್ಲ?

ಇದು ಈ ಕಾಲಘಟ್ಟದ ಬಿಕ್ಕಟ್ಟು. ಸಾಮಾಜಿಕ, ರಾಜಕೀಯ ರಂಗದಲ್ಲೂ ಈ ಬಿಕ್ಕಟ್ಟು ಎದ್ದು ಕಾಣುತ್ತಿದೆ. ಧಾರ್ಮಿಕ ಕ್ಷೇತ್ರವೂ ಈ ಬಿಕ್ಕಟ್ಟನ್ನು ಎದುರಿಸುತ್ತಿದೆ. ಹಾಗೆಯೇ ಸಾಹಿತ್ಯ ಕ್ಷೇತ್ರವೂ ವಿಶ್ವಾಸಾರ್ಹತೆಯ ಬಿಕ್ಕಟ್ಟನ್ನು ಎದುರಿಸುತ್ತಿದೆ. ಇಲ್ಲಿ ಒಂದು ಮಾತನ್ನು ಗಮನಿಸಬೇಕು. ರಾಜಕೀಯ ಪಕ್ಷ ಆಗುವುದು ಬೇರೆ; ರಾಜಕೀಯ ಪ್ರಜ್ಞೆ ಇಟ್ಟುಕೊಳ್ಳುವುದು ಬೇರೆ. ಈಗ ಸಾಹಿತಿಗಳು ಏನಾದರೂ ಹೇಳಿದರೆ, ಜನ ಇವರು ಯಾವ ಪಕ್ಷ.. ಎಂದು ಆಲೋಚಿಸುತ್ತಾರೆ. ನಾನು ಎಡಪಂಥೀಯನೇ ಇರಬಹುದು; ಆದರೆ ಎಡಪಕ್ಷದವನಲ್ಲ. ರಾಜಕೀಯ ಪಕ್ಷಗಳನ್ನು ಮೀರಿದ ರಾಜಕೀಯ ಪ್ರಜ್ಞೆ ಸಾಹಿತಿಗಳಲ್ಲಿ ಇರಬೇಕು ಎನ್ನುವವನು ನಾನು. 20ನೆಯ ಶತಮಾನ ಹೇಗೆ ಸಂಘಟನೆಯ ಶತಮಾನ ಆಗಿತ್ತೋ ಹಾಗೆಯೇ 21ನೆಯ ಶತಮಾನ ವಿಘಟನೆಯ ಶತಮಾನವಾಗಿದೆ. ಈಗಿನ ಪೀಳಿಗೆಯ ಲೇಖಕರು ಚೆನ್ನಾಗಿಯೇ ಬರೆಯುತ್ತಿದ್ದಾರೆ, ಸೃಜನಶೀಲತೆಯ ಕೊರತೆಯಿಲ್ಲ. ಆದರೆ ದಿಕ್ಸೂಚಿಯ ಕೊರತೆ ಇದೆ ಎಂದು ನನಗನ್ನಿಸುತ್ತದೆ. ಈಗ ಸಮಗ್ರ ವಿಮರ್ಶೆಯ ಕೊರತೆ ಇದೆ. ಒಟ್ಟು ವಾತಾವರಣದಲ್ಲೇ ಈ ಗೊಂದಲವಿದೆ. ವ್ಯಕ್ತಿಯ ಒಳಗೂ ವಿಘಟಿತ ವ್ಯಕ್ತಿತ್ವ. ಇದರಿಂದಾಗಿ ನೋಟದ ಖಚಿತತೆಯನ್ನು ಕಳೆದುಕೊಂಡಿದ್ದೇವೆ.

★ ಇದಕ್ಕೇನು ಪರಿಹಾರ?

ಸಂಘಟನೆಯ ರೂಪದಲ್ಲಿ ನಮ್ಮೊಳಗೆ ಚರ್ಚೆ ನಡೆಯಬೇಕು. ವ್ಯಕ್ತಿವಾದಿಯಾಗಿದ್ದರೆ ಸಿನಿಕತನ ಬೆಳೆಯುತ್ತದೆ. ವ್ಯಕ್ತಿಪ್ರಜ್ಞೆಯ ವೈಪರೀತ್ಯ ಸಲ್ಲದು. ನನ್ನ ಹೇಳಿಕೆಯೇ ಅಂತಿಮಸತ್ಯ ಎನ್ನುವವರನ್ನು ನಾನು ಅನುಮಾನದಿಂದಲೇ ನೋಡುತ್ತೇನೆ. ನನ್ನಿಂದ ಜನ ಕಲೀತಿದ್ದಾರೆ ಎನ್ನುವ



**ಶಿಕ್ಷಣದಲ್ಲಿ ಕಂಪ್ಯೂಟರೇ ಅಂತಿಮ ಅಲ್ಲ; ತರಗತಿಗಳೇ ಹೆಚ್ಚು ಮಹತ್ವದ್ದು. ಹೊಸ ತಂತ್ರಜ್ಞಾನ ಶಿಕ್ಷಣಕ್ಕೆ ಪೂರಕವಾಗಬೇಕು, ತಂತ್ರಜ್ಞಾನವೇ ಶಿಕ್ಷಣ ಆಗಬಾರದು.**

ಅಹಂಕಾರ ನಮ್ಮಲ್ಲಿ ಇರಬಾರದು. ಸಮ್ಮೇಳನದಲ್ಲಿ ಇಷ್ಟೊಂದು ಜನ ಸೇರಿದ್ದಾರಲ್ಲ, ಇವರಿಂದ ನಾವೇನು ಕಲಿಯುತ್ತಿದ್ದೇವೆ ಎಂದು ಯೋಚಿಸಬೇಕು. ಜನಸಮೂಹವನ್ನು ನೋಡಿ ನಮಲ್ಲಿ ಜವಾಬ್ದಾರಿಯೂ ಬೆಳೆಯಬೇಕು. ಸಾಹಿತಿಗಳು ಭಾಷೆಯ ಬಳಕೆಯ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಪುಢಾರಿಗಳ ಭಾಷೆಯ ಬಳಕೆ ಬೇರೆ; ನಮ್ಮದೇ ಬೇರೆ. ವಿಚಾರಗಳಿಗೆ ಸಂಬಂಧಿಸಿ ಭಿನ್ನಮತ ಇದ್ದರೂ ಅದನ್ನು ಸರಿಯಾದ ಭಾಷೆಯಲ್ಲಿ ವ್ಯಕ್ತಪಡಿಸಬೇಕು. ವಿಚಾರಗಳಿಗೆ ಸಂಬಂಧಿಸಿ ತೀವ್ರ ಭಿನ್ನಮತ ಹೊಂದಿರುವ ಸಾಹಿತಿಗಳ ಕೃತಿಗಳನ್ನೂ ನಾವು ಓದಬೇಕು. ಟಾಲ್‌ಸ್ಟಾಯ್‌ಗೆ ಕ್ರಾಂತಿಯ ಬಗ್ಗೆ ಅಂತಹ ಒಲವಿಲ್ಲದಿದ್ದರೂ, ಲೆನಿನ್ ಆತನನ್ನು ಗೌರವಿಸುತ್ತಾನೆ, ಗ್ರೇಟ್ ಅಂತ ಕರೀತಾನೆ. ಬಾಲ್ಜಾಕ್ ಪ್ರತಿಗಾಮಿ ವಿಚಾರಗಳನ್ನು ಪ್ರತಿಪಾದಿಸುತ್ತಿದ್ದರೂ ಆತನನ್ನೂ ಓದಿ ಎಂದು ಲೆನಿನ್ ಹೇಳುತ್ತಾನೆ. ನಮ್ಮ ಸೈದ್ಧಾಂತಿಕ ವಿರೋಧಿ ವಲಯದ ವಿದ್ಯಮಾನಗಳನ್ನೂ ನಾವು ಅರ್ಥ ಮಾಡಿಕೊಳ್ಳಬೇಕು. ಅದು ಕೆಲವು ಸಲ ನಮ್ಮನ್ನು ನಾವು ತಿದ್ದಿಕೊಳ್ಳಲೂ ನೆರವಾಗಬಹುದು.

★ ನೀವು ರಾಜ್ಯದಲ್ಲಿ ಬಂಡಾಯ ಸಾಹಿತ್ಯ ಸಂಘಟನೆಯನ್ನು ಕಟ್ಟಿ ಬೆಳೆಸಿದವರು. ಈಗ ಕಸಾಪದ ಅಖಿಲ ಭಾರತ ಸಮ್ಮೇಳನ ಅಧ್ಯಕ್ಷತೆಯ ಗೌರವ ನಿಮ್ಮನ್ನು ಹುಡುಕಿಕೊಂಡು ಬಂದಿದೆ. ಬಂಡಾಯ ಸಂಘಟನೆಯದ್ದು ಮುಗಿದ ಕಾಲವೆ?

ಬಂಡಾಯ ಸಾಹಿತ್ಯ ಸಂಘಟನೆ ಯಾವುದೇ ಒಂದು ವಾದಕ್ಕೆ ಕಟ್ಟುಬಿದ್ದಿರಲಿಲ್ಲ. ಅಲ್ಲಿ ಲೋಹಿಯವಾದಿಗಳಿದ್ದಂತೆಯೇ ಗಾಂಧಿ, ಅಂಬೇಡ್ಕರ್‌ವಾದಿಗಳೂ ಇದ್ದರು. ಸಮಾಜದ ಹಿತಕ್ಕಾಗಿ ಎಲ್ಲರೂ ಒಗ್ಗಟ್ಟಾಗಿದ್ದೆವು. ಸಮಾಜ ಬದಲಾವಣೆ ಆಗಬೇಕು ಎನ್ನುವುದು ಎಲ್ಲರ ಆಶಯವಾಗಿತ್ತು. ಬಂಡಾಯ ಸಂಘಟನೆಯ ಅಗತ್ಯ ಈಗಲೂ ಇದೆ. ಗೆಳೆಯರ ಒತ್ತಾಯಕ್ಕೆ ಕಟ್ಟು ಬಿದ್ದು ನಾನು ರಾಜ್ಯ ಸಂಚಾಲಕನಾಗಿ ಹಲವು ಅವಧಿಗೆ ಮುಂದುವರಿದೆ. ಆಮೇಲೆ ಬೇರೆಯವರು ಸಂಚಾಲಕರಾದರು. ಆದರೆ ಅದೇಕೋ ಹೆಚ್ಚು ಚಟುವಟಿಕೆ ಕಾಣಲಿಲ್ಲ. ಈಗ ಮತ್ತೆ ಬಂಡಾಯ ಸಾಹಿತ್ಯ ಸಂಘಟನೆ ಸಕ್ರಿಯವಾಗುತ್ತಿದೆ. ಹಲವು ಜಿಲ್ಲೆಗಳಲ್ಲಿ ಕಮ್ಮಟಗಳನ್ನು ಯೋಜಿಸುತ್ತಿದೆ. ಪರಂಪರೆಯ ಪ್ರಜ್ಞೆ ಬಂಡಾಯಕ್ಕೂ ಬೇಕು. ನಾವು ಬಸವಣ್ಣ, ಅಲ್ಲಮ, ಪಂಪನನ್ನು ಯಾವತ್ತೂ ನಿರಾಕರಿಸಿಲ್ಲ. ನನ್ನ ಒಟ್ಟು ಬದುಕಿನ ಚರಿತ್ರೆಯ ಗ್ರಾಫ್ ಗಮನಿಸಿ. ಕೆಲವು ತಪ್ಪುಗಳನ್ನೂ ನಾನು ಮಾಡಿರಬಹುದು. ಆದರೆ ಯಾರನ್ನೇ ಆಗಲಿ ಅವರ ಬದುಕಿನ ಒಟ್ಟು ಗ್ರಾಫ್‌ಅನ್ನು ಗಮನಿಸದೆ ಸಾರಾಸಗಟಾಗಿ ಟೀಕೆ ಮಾಡುವುದು ಸರಿಯಲ್ಲ.

★ ಸಾಮಾನ್ಯವಾಗಿ 60 ವಯಸ್ಸಿನ ಬಳಿಕ ಅಧ್ಯಾತ್ಮದತ್ತ ಬರಹಗಾರರ ಒಲವು ಹೆಚ್ಚುವುದಿದೆ. ನಿಮ್ಮ ಆಧ್ಯಾತ್ಮಿಕ ಧೋರಣೆಯ ಬಗ್ಗೆ ನೀವು ಯಾವತ್ತೂ ಮಾತನಾಡಿದಂತಿಲ್ಲ?

ನನ್ನಲ್ಲಿ ಆಧ್ಯಾತ್ಮಿಕ ಒಲವು ಇಲ್ಲ. ಆದರೆ ಇದು ಅಧ್ಯಾತ್ಮದ ಕುರಿತ ಮರುಚಿಂತನೆಯ ಸಂದರ್ಭ ಎನ್ನುವುದು ನನಗೆ ಖಚಿತವಾಗಿದೆ. ನನ್ನದು ವಿವೇಕಾನಂದರು, ಕುವೆಂಪು ಅವರ ಮಾದರಿಯ ಸಾಮಾಜಿಕಅಧ್ಯಾತ್ಮದ ಚಿಂತನೆ. ಹಿಂದೂವಾದದಲ್ಲೇ ನನ್ನ ಆಯ್ಕೆ ಗಾಂಧೀಜಿ; ಗೋಡ್ಸೆ ಅಲ್ಲ. ಎಲ್ಲ ಧರ್ಮಗಳಲ್ಲೂ ಇವತ್ತು ಈ ರೀತಿಯ ಆಯ್ಕೆ ಇದೆ. ಬಿನ್ ಲಾಡೆನ್‌ನ ಇಸ್ಲಾಂ ಬೇರೆ, ಮುಹಮ್ಮದ್ ಪೈಗಂಬರರ ಇಸ್ಲಾಂ ಬೇರೆ. ಹಾಗೆಯೇ ಬೆನ್ನಿಹಿನ್ ಬೋಧಿಸುವ ಕ್ರಿಶ್ಚಿಯಾನಿಟಿಗಿಂತ ಮದರ್ ತೆರೆಸಾ ಬೋಧಿಸುವ ಕ್ರಿಶ್ಚಿಯಾನಿಟಿ ಉತ್ತಮ. 1928ರ ನಂತರ ಗಾಂಧೀಜಿಯವರ ಹಲವು ಆಲೋಚನೆಗಳು ಬದಲಾಗುತ್ತಾ ಬಂದವು. ಗಾಂಧೀಜಿಯವರಿಗೆ ಶ್ರೀರಾಮ, ರಾಜಕೀಯದ ಸಾಧನ ಆಗಿರಲಿಲ್ಲ. ಅಪ್ಪಟ ನಾಸ್ತಿಕವಾದಿಯಾದ ಗೋರಾ ಜತೆಗೂ ಗಾಂಧೀಜಿ ಆರೋಗ್ಯಪೂರ್ಣ ಸಂವಾದ ನಡೆಸುತ್ತಾರೆ. ಪುರಾಣ ಕಾವ್ಯವೇ ಬೇರೆ, ಪುರಾಣಶಾಸ್ತ್ರವೇ ಬೇರೆ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು.